ಈ ಮೇಲ್ಕಂಡ ವಿಚಾರದಲ್ಲಿ ತನಿಖೆ ಮಾಡಿ ಜೀತ ವಿಮುಕ್ತರ ಪಟ್ಟಿಯಲ್ಲಿ ಇಲ್ಲದೇ ಇದ್ದಂತಹ ಮತ್ತು ಜೀತ ವಿಮುಕ್ತಿ ಪರಿಹಾರಕ್ಕೆ ಅರ್ಹನಲ್ಲದ ವ್ಯಕ್ತಿಯೊಬ್ಬನಿಗೆ ಪರಿಹಾರ ಕೊಟ್ಟಿರುವುದು ತಪ್ಪು ಎಂದು ಸಾಬೀತಾಗಿರುತ್ತದೆ.

ಈಗಿನ ಪಂಚಾಯ್ತಿ ರಾಜ್ಯ ವ್ಯವಸ್ಥೆಯ ಪ್ರಕಾರ ಫಲಾನುಭವಿ ಯಾರು ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಕಾರ್ಯದರ್ಶಿಯವರ ಸಮೇತ ಪ್ರಧಾನರು ಸಹ ಜವಾಬ್ದಾರಿವುಳ್ಳವರಾಗಿರುತ್ತಾರೆ.

ಆದಕಾರಣ ಉದ್ದೇಶಪೂರಿತವಾಗಿ ಆಲನಹಳ್ಳಿ ವಂಡಲ ಪಂಚಾಯಿತಿ ಪ್ರಧಾನರು ಜೀತವಿಮುಕ್ತ ಸಲ್ಲದಂತವನಿಗೆ ಸವಲತ್ತನ್ನು ಕೊಡಿಸಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿರುತ್ತಾರೆ. ಆದ್ದರಿಂದ ಪ್ರಧಾನರನ್ನು ವಜಾ ಮಾಡಲು ಈಗಾಗಲೇ ಜಿಲ್ಲಾ ಪರಿಷತ್ ಅಧ್ಯಕ್ಷರೂ ಹಾಗೂ ಕಾರ್ಯದರ್ಶಿಗಳಿಗೆ ಒತ್ತಾಯಿಸಲಾಗಿದೆ. ಆದರೆ ಏನು ಕ್ರಮ ಕೈಗೊಂಡಿಲ್ಲದಿರುವುದರಿಂದ ಈ ಕೂಡಲೇ ಪ್ರಧಾನರನ್ನು ವಜಾ ಮಾಡಲು ಕ್ರಮಕೈಗೊಳ್ಳಲಾಗುವುದೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಲ್ಲಿ ತಿಳಿಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರ ಜಿಲ್ಲಾಪರಿಷತ್ತಿನ ಕಾರ್ಯವ್ಯಾಪ್ತಿಗೆ ಬರುತ್ತದೆ. ಮಾನ್ಯ ಸದಸ್ಯರು ಸದರಿ ಜಿಲ್ಲಾಪರಿಷತ್ತಿನ ಸಕ್ರಿಯ ಸದಸ್ಯರಾಗಿರುವುದರಿಂದ ಇದರ ಬಗ್ಗೆ ಪರಿಹಾರವನ್ನು ಜಿಲ್ಲಾ ಪರಿಷತ್ತಿನ ಮುಖಾಂತರ ಪಡೆಯಬೇಕೆಂದು ಸವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

೭. ರಾಜ್ಯದಲ್ಲಿ ಹೊಸದಾಗಿ ಜಾರಿಗೆ ತಂದ ಪ್ರಾಧಿಕಾರಗಳಿಗೆ ಅಧಿಕಾರಿಗಳನ್ನು ನೇಮಿಸದೆ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದು.

ಶ್ರೀ ಎಂ.ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೆ. ವಿಧಾನ ಸಭೆಯ ಕಳೆದ ಅಧಿವೇಶನದಲ್ಲಿ ರಾಜ್ಯದಲ್ಲಿರುವ ೫ ಪಟ್ಟಣಗಳಿಗಾಗಿ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ಆಶ್ವಾಸನೆ ಕೊಟ್ಟು ಪ್ರಾಧಿಕಾರ ಕಾನೂನನ್ನು ಪಾಸು ಮಾಡಲಾಯಿತು. ಅದರಂತೆ ರಾಜ್ಯಪತ್ರದಲ್ಲಿ ಆದೇಶವನ್ನೂ ಸಹ ಪ್ರಕಟಿಸಲಾಯಿತು. ಅದಾದನಂತರ ಈಗಿರುವ ನಗರಾಭಿವೃದ್ಧಿ ಮಂಡಳಿಗಳನ್ನು ಹಾಗೂ ನಗರ ಯೋಜನಾ ಪ್ರಾಧಿಕಾರಗಳನ್ನೂ ರದ್ದು ಪಡಿಸಿರುವಂತೆ ಆದೇಶ ಹೊರಡಿಸಲಾಯಿತು. ಆದರೆ ಹೊಸದಾಗಿ ರಚಿಸಿರುವ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಿಗಳಿಗೆ ಯಾವುದೇ ಸದಸ್ಯರನ್ನೂ ಅಥವಾ ಅಧ್ಯಕ್ಷರನ್ನೂ ನೇಮಿಸಿರುವುದಿಲ್ಲ. ಸದ್ಯದ ಸ್ಥಿತಿಯಲ್ಲಿ ನಗರಾಭಿವೃದ್ಧಿ ಮಂಡಳಿಗಳ ಅಧ್ಯಕ್ಷರನ್ನು ಮಾತ್ರ ವಜಾ ಮಾಡಿ ಆಯಾ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸದಸ್ಯರು ಹಾಗೆಯೇ ಮುಂದುವರಿದಿದ್ದಾರೆ ನಗರಾಭಿವೃದ್ಧಿಯ ಕೆಲಸಗಳು ಮಾತ್ರ ತ್ರಿಶಂಕಾಸ್ವರ್ಗದ ಸ್ಥಿತಿಯಲ್ಲಿದೆ. ಪ್ರಾಧಿಕಾರಿಗಳು ಪೂರ್ಣ ರೂಪದಲ್ಲಿ ರಚನೆಯಾಗಿದೆ ಯಾವ ಕೆಲಸವೂ ನಡೆಯುತ್ತಿಲ್ಲ. ಸರಕಾರ ಈ ಕೂಡಲೇ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಕಾರ್ಯರೂಪಕ್ಕೆ ತರುವುದೇ ಎನ್ನುವ ಬಗ್ಗೆ ಈ ಸದನದಲ್ಲಿ ಉತ್ತರಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ. ೫ ನಗರ ಪಾಲಿಕೆಗಳಿಗೆ ಒಂದು ನಗರ ಪ್ರದೇಶ ಸೇರಿ ಒಟ್ಟು ೬ ಪ್ರಾಧಿಕಾರಿಗಳನ್ನು ಜಾರಿಗೆ ತರಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ೧೫–೯–೧೯೮೮ ರಂದು ಸಮಿತಿಗಳನ್ನು ರಚನೆ ಮಾಡಲಾಗಿದೆ. ಉಳಿದ ೧೫ ನಗರ ಪ್ರದೇಶಗಳಿಗೆ ಪ್ರಾಧಿಕಾರಗಳನ್ನು ಮಾಡುವ ಬಗ್ಗೆ ೧–೫–೧೯೮೮ರಂದು ಕಾನೂನನ್ನು ಜಾರಿಗೆ ತರಲಾಗಿದೆ. ಸಮಿತಿಯ ರಚನೆಯನ್ನು ಇಷ್ಟರಲ್ಲೇ ಮಾಡಲಾಗುವುದು.

೮. ರಾಜ್ಯದಲ್ಲಿರುವ ಅರೆಕಾಲಿಕ ಶಿಕ್ಷಕರಿಗೆ ಪೂರ್ಣಕಾಲಿಕ ಶಿಕ್ಷಕರ ಸೌಲಭ್ಯಗಳನ್ನು ನೀಡುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು) — ಮಾನ್ಯ ಅಧ್ಯಕ್ಷರೇ, ಬೃಹದಾಕಾರವಾಗಿ ಬೆಳೆದರೂ ಅನೇಕ ಖಾಲಿ ಸ್ಥಾನಗಳಿಗೆ ಖಾಯಂ ಭರ್ತಿ ಆಗದೆ ಕರ್ನಾಟಕ ರಾಜ್ಯದ ಸರ್ಕಾರೀ ಪ್ರೌಢಶಾಲಾ ಅರೆಕಾಲಿಕ ಶಿಕ್ಷಕರ ಬದುಕಿನ ಕಥೆ – ಇದೊಂದು ಪಂಚವಾರ್ಷಿಕ ಪರದಾಟದ ಅಸಹನೀಯ ವ್ಯಥೆ.